ದಿನಾಂಕ: **31-12-2019** ರಂದು ಬೆಳಿಗ್ಗೆ **11.00** ಗಂಟೆಗೆ ಮಾನ್ಯ ಶ್ರೀ ಎಂ.ಜಿ. ಹಿರೇಮಠ, ಜಿಲ್ಲಾಧಿಕಾರಿಗಳು ಗದಗ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕೋರ್ಟ ಹಾಲ್ ಗದಗ ಇಲ್ಲಿ ರಾಷ್ಟ್ರೀಯ ಹಸಿರುಪಡೆಯ (ಇಕೋ-ಕ್ಲಬ್) ಜಿಲ್ಲಾ ಅನುಷ್ಠಾನ ಮತ್ತು ಮೇಲುಸ್ತುವಾರಿ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:
(ಹಾಜರಾತಿ ಪುಸ್ತಕದಲ್ಲಿದ್ದಂತೆ)

ಸಭೆಯು ಶ್ರೀ ಜಿ.ಎಲ್. ಬಾರಾಟಕ್ಕೆ ಡಿ.ವೈ.ಪಿ.ಸಿ.ಓ. ಎಸ್.ಎಸ್.ಕೆ. ಗದಗ ಇವರು ಸದಸ್ಯರೆಲ್ಲರನ್ನು ಸ್ವಾಗತಿಸಿದರು.

➢ 2019-20ಕ್ಕೆ ರಾಷ್ಟ್ರೀಯ ಹಸಿರು ಪಡೆಯನ್ನು ಎಲ್ಲ ಶಾಲೆಗಳಲ್ಲಿ ಅನುಷ್ಠಾನಗೊಂಡಿರುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳ್ಳುವ ಬಗ್ಗೆ ಮಾನ್ಯ ಅಧ್ಯಕ್ಷರು ಜಿಲ್ಲಾಧಿಕಾರಿಗಳು ಗದಗ ಇವರು ಸೂಚಿಸಿದರು.

(ಕ್ರಮ: ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು)

➢ ರಾಷ್ಟ್ರಮಟ್ಟದಲ್ಲಿ **EMPRI** ವತಿಯಿಂದ ಕೊಡಮಾಡುವ ಉತ್ತಮ ಹಸಿರುಪಡೆ ಪ್ರಶಸ್ತಿಗೆ ಭಾಜನರಾದ ಸರಕಾರಿ ಪ್ರೌಢಶಾಲೆ ಗೊಜನೂರು, ತಾ॥ ಶಿರಹಟ್ಟಿ ಶಾಲಾ ಮುಖ್ಯೋಪಾಧ್ಯಾಯರು, ಗುರುಮಾತೆಯರು ಮತ್ತು ಮಕ್ಕಳಿಗೆ ಅಧ್ಯಕ್ಷರು ಶುಭ ಹಾರೈಸಿದರು ಮತ್ತು ಸನ್ಮಾನಿಸಿದರು.

(ಕ್ರಮ: ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು)

➢ ಶ್ರೀ ಎಚ್.ಬಿ. ರಡ್ಡೇರ, ಎ.ಪಿ.ಸಿ.ಓ. ಆರ್.ಎಂ.ಎಸ್.ಎ. ನೋಡಲ್ ಅಧಿಕಾರಿಗಳು ರಾಷ್ಟ್ರೀಯ ಹಸಿರುಪಡೆ ಇವರು ಕಾರ್ಯಕ್ರಮದ ಸಂಕ್ಷಿಪ್ತ ರೂಪರೇಷೆಗಳನ್ನು, ಪ್ರಸ್ತಾವನೆ/ವಾರ್ಷಿಕ ಕ್ರಿಯಾಯೋಜನೆಯ/ಪರಿಸರ ದಿನಾಚರಣೆಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು ಹಾಗೂ ದಿನಾಂಕ: 22-01-2020 ರಂದು ಗದಗ ದಲ್ಲಿ ಗದಗ ತಾಲೂಕಿನ 60 ಜನ ಮುಖ್ಯ ಶಿಕ್ಷಕರಿಗೆ ಮತ್ತು ದಿ: 23-01-2020 ರಂದು ಶಿರಹಟ್ಟಿ ಮತ್ತು ಮುಂಡರಗಿ ತಾಲೂಕಿನ 60 ಜನ ಮುಖ್ಯ ಶಿಕ್ಷಕರಿಗೆ ಒಂದು ದಿನದ ತರಬೇತಿಯನ್ನು ಇಕೋ-ಕ್ಲಬ್ ಅಡಿಯಲ್ಲಿ ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳ ಕುರಿತು ತರಬೇತಿ ನೀಡಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು.

(ಕ್ರಮ: ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು)

➢ ಮಾನ್ಯ ಅಧ್ಯಕ್ಷರು ಮಾತನಾಡಿ ರಾಷ್ಟ್ರಕ್ಕೆ ಪ್ರಥಮಸ್ಥಾನ ಪಡೆದ ಬಗ್ಗೆ ವಿಜೇತ ಸರಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರಿಂದ ಸಂಪೂರ್ಣ ಮಾಹಿತಿ ಪಡೆದರು. ಅವರ ಪ್ರಯತ್ನಕ್ಕೆ ಸಭೆಯಲ್ಲಿ ಶ್ಲಾಘಿಸಿದರು ಮತ್ತು ಉಳಿದಂತೆ ಇತರೆ ತಾಲೂಕಿನ ಎಲ್ಲ ಬಿ.ಇ.ಓ. ರವರಿಗೆ ರಾಷ್ಟ್ರೀಯ ಹಸಿರುಪಡೆಯ ಕುರಿತು ಸಮರ್ಪಕ ಅನುಷ್ಠಾನ ಮತ್ತು ತಿಂಗಳುವಾರು ಕ್ರಿಯಾಯೋಜನೆಯಂತೆ ಕ್ರಮಕೈಗೊಳ್ಳಲು ಎಲ್ಲ ಮುಖ್ಯ ಶಿಕ್ಷಕರಿಗೆ ತಿಳಿಸಲು ಸೂಚಿಸಿದರು.

(ಕ್ರಮ: ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು)

ಸಭೆಯಲ್ಲಿ ಕೊನೆಯಲ್ಲಿ ಶ್ರೀ ಡಿ.ಐ. ಅಸುಂಡಿ, ಎ.ಇ.ಓ. ಎಂ.ಎಂ.ಎಸ್. ಗದಗ ರವರು ಹಾಜರಿದ್ದ ಎಲ್ಲ ಅಧಿಕಾರಿಗಳು ಹಾಗೂ ಭಾಗವಹಿಸಿದ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಗದಗ ಜಿಲ್ಲೆ